ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಹೊಸಕೋಟೆ ತಾಲ್ಲೂಕು ಎಡಗನಹಳ್ಳಿ ಹೋಬಳಿ ದೇವಕಿಟ್ಟಹಳ್ಳಿಲಿರುವ
ಮರಿನಂಜುಂಡಪ್ಪನವರ ವಿಷಯದಲ್ಲಿ

ಸ್ರ 1906—07ನೆ ಇಸವಿ ದಿವಾಳಿ ಕೇಸ್ ಮಿಸ್. ನಂಬ್ಬರು 621 ಮತ್ತು ಮಿಸ್. 387—05-06.

ಹುಕ್ಕುಂ.

ಫೋಲ್ಕಂಡ ಮರಿನಂಜುಂಡಪ್ಪನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿಗೆ ಅಂಶವು-ಜೆ. ಹೆಚ್. ಭಾಭ್ಹಾ, ಎಸ್ಕ್ವಯರ್, ಬಿ. ಎ., ಬ್ಯಾರಿಸ್ಟರ್ ಅಟ್ ಲಾ ಯವರ ರೂಬರೂಬ್ ಅರ್ಜಿದಾರರಾದ ಮರಿನಂಜುಂಡಪ್ಪನವರ ಪರವಾಗಿ ಪ್ಲೀಡರ ವೆಂ|| ಸಿ. ರಾಘವಾಚಾರ್ರು, ಹಾಜರು ಮತ್ತು ಸದರಿಯವರ ಲೇಣೇದಾರರುಂದ 1ನೆ ದೊಡ್ಡೀಗಾಡನನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾ ನಲೀ ಅಥವಾ ಲಾಯರಿ ಮೂಲಕವಾಗಿಯಾಗಲೀ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ,—1. ಈರಾರಡ್ಡಿ, 2. ಸರಾಫ್ ಪುಟ್ಟಣ್ಣ, 3. ರುದ್ರಪ್ಪ, 4. ಮುತ್ತಪ್ಪ, 5. ನಾಗಪ್ಪ. ಸಿವಿಲ್ ಪ್ರೊಸಿಜ್ಯರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಮರಿನಂಜುಂಡಪ್ಪನು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತಿಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿವೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಿ ಜೆಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ರ 1907ನೆ ಇಸವಿ ಆಗಸ್ಟು 9ನೆ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬ್ಬರು	ಲೇಣೇದಾರ, ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬ್ಬಂದ ಅವರುಗಳ ವಾಸಸ್ಥಳ.	ಯಾವಾಗ ದೇಣಿಗೆ ಸಂಪಾದಿಸಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
		ರೂ. ಆ. ಪೈ.		
1	ಹೊಸೂರು ತಾಲ್ಲೂಕು ಸತ್ಯಮಂಗಲದಲ್ಲಿರುವ ದೊಡ್ಡೀಗಾಡ.	271 13 0	... ಡಿಕ್ರೀ ಬಾಬತು ...	ಕೃಷ್ಣಗಿರಿ ಮುನಸೀಫ್ ಕೋರ್ಟು ಅಸಲ್ 188—1903.
2	ದೊಡ್ಡಬಳ್ಳಾಪುರದಲ್ಲಿರುವ ಸರಾಫ್-ಪುಟ್ಟಣ್ಣ.	490 0 0	... ಡಿಟೋ ...	ದೊಡ್ಡಬಳ್ಳಾಪುರದ ಮುನಸೀಫ್ ಕೋರ್ಟು ಅಸಲ್ 280-1903—04.
3	ಹೊಸಕೋಟೆ ತಾಲ್ಲೂಕು ಬಡಿಗನಹಳ್ಳಿಲಿರುವ ಯಜಮಾನ ರುದ್ರಪ್ಪ.	447 2 3	... ಕೈಸಾಲದ ಬಾಬತು ...	...
4	ಡಿಟೋ ತಾಲ್ಲೂಕು ದೊಡ್ಡದುನ್ನಸಂದ್ರದಲ್ಲಿರುವ ಕೊರವರ ಮುತ್ತಪ್ಪ.	12 0 0	... ಡಿಕ್ರೀ ಬಾಬತು ...	ಬೆಂಗಳೂರು ಸಬ್ ಜಡ್ಜ್ ಕೋರ್ಟು—ಕೋರ್ಟು ಖರ್ಚು ಬಾಬತು.
5	ಡಿಟೋ ಸ್ಥಳದಲ್ಲಿರುವ ಕೊರವರ ಮುನಿವೆಂಕಟಪ್ಪ ಈತನಿಂದ ಡಿಕ್ರೀ ಮೇಡೋರ್ ಹೊಂದಿರುವ ನೀಲಿ ನಾಗಪ್ಪ.	11 0 0	... ಡಿಟೋ	ಡಿಟೋ
6	ಬೆಂಗಳೂರು ತಾಲ್ಲೂಕು ಹೂಡಿಯಲ್ಲಿರುವ ಹನುಮರಡ್ಡಿ ಮಗ ಈರಾರಡ್ಡಿ.	220 0 0	.. ಡಿಟೋ ...	ಬೆಂಗಳೂರು ಅಡೀಷನಲ್ ಮುನಸೀಫ್ ಕೋರ್ಟು ಅಸಲ್ 306-1899-00
	ಜುಮ್ಲಾ ...	1,451 15 3	...	

ಜೆ. ಹೆಚ್. ಭಾಭ್ಹಾ,
ಸಬಾರ್ಡಿನೇಟ್ ಜಡ್ಜ್.